# 2019-20ನೇ ಸಾಲಿನ ಕಲಾ ಸಂಘದ ವರದಿ

ಮಲೆನಾಡಿನ ಹಚ್ಚ ಹಸಿರಿನ ಸಾಲಿನಲ್ಲಿ ಕಂಗೊಳಿಸುವ ಶೃಂಗೇರಿ ತಾಯಿ ಶಾರದಾಂಬೆಯ ಮಡಿಲಿನಲ್ಲಿ ಹುಟ್ಟಿದ ನಾವೇ ಪುಣ್ಯವಂತರು. ಸಹ್ಯಾದ್ರಿ ಘಟ್ಟಗಳ ಸಾಲಿನಲ್ಲಿ ಬೆಳೆದು ನಿಂತ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಸ್ಮಾರಕ ಕಾಲೇಜು ನಮ್ಮೆಲ್ಲರ ಹೆಮ್ಮೆಯ ಸಂಕೇತವಾಗಿದೆ.

ನಾಡು ನುಡಿಗಳ ತವರುಗಳನ್ನು ಪರಿಚಯಿಸುವ ಕಲಾ ವಿಭಾಗವು ನಮ್ಮ ಜ್ಞಾನ ಶಾಖೆಯ ಮೇಲುಗೈ ಯಾಗಿದೆ.

ಶ್ರೀ ಜೆ.ಸಿ.ಬಿ.ಎಂ ಕಾಲೇಜು ಶೃಂಗೇರಿ 2019-20ನೇ ಸಾಲಿನ ಕಲಾ ಸಂಘದ ವರದಿ ಪ್ರತಿ ವರ್ಷದಂತೆ ಈ ವರ್ಷವೂ ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಿಸಿ ಚಟುವಟಿಕೆ ಗಳ ಗಮನ ಹಾಗೂ ವೇದಿಕೆ ಸಿದ್ದಪಡಿಸಿಕೊಳ್ಳಲು ಒಂದು ಅವಕಾಶವನ್ನು ಕಾಲೇಜು ನಮಗೆ ನೀಡುತ್ತದೆ. ಅದರಂತೆಯೇ ನಮ್ಮ ಸಾಲಿನ ಕಲಾ ಸಂಘವು ಪ್ರಾಂಶುಪಾಲರು ಹಾಗೂ ಉಪನ್ಯಾಸಕರ ನೇತೃತ್ವದಲ್ಲಿ ಪದಾಧಿಕಾರಿಗಳ ಆಯ್ಕೆಯೊಂದಿಗೆ ಕಲಾ ಸಂಘವು 08.08.2019ರಂದು ರಚನೆಯಾಯಿತು.

ಪದಾಧಿಕಾರಿಗಳ ವಿವರ ಇಂತಿದೆ :

1. ಅಧ್ಯಕ್ಷರು – ನಿಖಿಲ್ ಬಿ.ಜಿ.
2. ಉಪಾಧ್ಯಕ್ಷರು – ನಿಖಿಲ್ ಕೆ.ಕೆ.
3. ಕಾರ್ಯದರ್ಶಿ – ರಮ್ಯ ಎಸ್.ಟಿ.
4. ಸಹಕಾರ್ಯದರ್ಶಿ– ನವ್ಯ ಕೆ.ಯು.
5. ಖಜಾಂಚಿ –ಸುವಿನ್ ಬಿ.ಎಸ್.
6. ಸಾಂಸ್ಕೃತಿಕ ಕಾರ್ಯದರ್ಶಿ–ಶ್ರೀಖರ ಹೆಚ್.ಪಿ.
7. ಕ್ರೀಡಾ ಕಾರ್ಯದರ್ಶಿ –ಅನುದೀಪ ವಿ.ವಿ.

ತರಗತಿ ಪ್ರತಿನಿಧಿಗಳು :

1. ಕಾರ್ತೀಕ್ ಜಿ.ವಿ.
2. ಕೀರ್ತಿ ಎಸ್.ಜಿ.

ಕಲಾಸಂಘದ ಉದ್ಘಾಟನಾ ಸಮಾರಂಭವನ್ನು 06.09.2019ರಂದು ಕಾಲೇಜಿನ ಮುಖ್ಯ ಸಭಾಂಗಣದಲ್ಲಿ ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಕಾಲೇಜಿನ ಪ್ರಾಚಾರ್ಯರಾದ ಡಾ॥ ಎಂ.ಸ್ವಾಮಿರವರು ವಹಿಸಿಕೊಂಡಿದ್ದರು. ಹಾಗೂ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಖ್ಯಾತ ಸಿನಿಮಾ ನಿರ್ದೇಶಕರಾದ ಸಿಂಪಲ್ ಸುನಿರವರು ನಡೆಸಿಕೊಟ್ಟಿರುತ್ತಾರೆ. ಹಾಗೂ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬಿಗ್‌ಬಾಸ್ ಖ್ಯಾತಯ ಒಳ್ಳೆ ಹುಡುಗ ಪ್ರಥಮ್‌ರವರು ಆಗಮಿಸಿ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿರುತ್ತಾರೆ. ಹಾಗೂ ಈ ಕಾರ್ಯಕ್ರಮದಲ್ಲಿ ಅಣ್ಣಪ್ಪ ಮಳಿಮಠ್‌ರವರು ವಿದ್ಯಾರ್ಥಿಗಳಿಗೆ ಉಪನ್ಯಾಸವನ್ನು ನೀಡಿದರು. ನಂತರ ಸಾಂಸ್ಕೃತಿಕ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗೆ ನಡೆಸಲಾಯಿತು.

ದಿನಾಂಕ 11.07.2019ರಂದು ಕೇಂದ್ರ ಮುಂಗಡ ಪತ್ರ 2019-20, ವಿದ್ಯಾರ್ಥಿಗಳಿಂದ ಚರ್ಚೆ, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ॥ ಎಂ.ಸ್ವಾಮಿರವರು ವಹಿಸಿಕೊಂಡಿರುತ್ತಾರೆ. ಹಾಗೂ ವಿದ್ಯಾಧರ ಎಂ.ವಿ.ರವರು ಕಾರ್ಯಕ್ರಮದ ಸಂಯೋಜಕರು ಆಗಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಾಳಗಿ ಡಾ॥ ಹೆಚ್.ಸಿ.ವೀರಪ್ಪಗೌಡರು, ನಿವೃತ್ತ ಪ್ರಾಂಶುಪಾಲರು ಶ್ರೀ ಜೆ.ಸಿ.ಬಿ.ಎಂ. ಕಾಲೇಜು ಶೃಂಗೇರಿ ಇವರು ಉಪನ್ಯಾಸ ವನ್ನು ನೀಡಿರುತ್ತಾರೆ.

ದಿನಾಂಕ 27.07.2019 ರಂದು ಸಾಹಿತ್ಯ ಸಂಘ ಉದ್ಘಾಟನೆ ಸಮಾರಂಭ ಹಮ್ಮಿಕೊಳ್ಳಲಾಗಿದ್ದು ಈ ಕಾರ್ಯಕ್ರಮದ ಉದ್ಘಾಟಕರಾಗಿ ಹೆಚ್.ಎಂ. ನಾಗರಾಜ್, ಪ್ರಾಚಾರ್ಯರು ಪದವಿಪೂರ್ವ ಕಾಲೇಜು, ಕಳಸಾಪುರ ಇವರು ನಡೆಸಿಕೊಟ್ಟಿರುತ್ತಾರೆ.

ಬರೆದಂತೆ ಬದುಕಾಗುವುದಿಲ್ಲ, ಬದುಕಿದಂತೆ ಬರೆಯಬಹುದು – ಹೆಚ್.ಎಂ. ನಾಗರಾಜ್‌ರಾವ್

ದಿನಾಂಕ 14.09.2019 ರಂದು ಇತಿಹಾಸ ವೇದಿಕೆ ವತಿಯಿಂದ ಪಾರಂಪರಿಕ ತಾಣಗಳು ಮತ್ತು ಅವುಗಳ ರಕ್ಷಣೆ ಈ ಕಾರ್ಯಕ್ರಮದ ಉಪನ್ಯಾಸವನ್ನು ಡಾ॥ ಹೆಚ್.ಎಸ್.ವಿಷ್ಣುವರ್ಧನ, ಪ್ರಾಂಶುಪಾಲರು ಎಂ.ಇ.ಎಸ್ ಕಾಲೇಜು, ಚಿಕ್ಕಮಗಳೂರು ಇವರು ನೀಡಿರುತ್ತಾರೆ.

ದಿನಾಂಕ 17.09.2019 ರಂದು ಅರ್ಥಶಾಸ್ತ್ರ ವಿಭಾಗದ ವತಿಯಿಂದ "Adam Smith theory of Economic Development" ಎಂಬ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರ ಭಟ್ ನಿವೃತ್ತ ಪ್ರಾಂಶುಪಾಲರು ಶ್ರೀ ಜೆ.ಸಿ.ಬಿ.ಎಂ ಕಾಲೇಜು ಶೃಂಗೇರಿ ಇವರು ವಿದ್ಯಾರ್ಥಿಗಳಿಗೆ ಉಪನ್ಯಾಸವನ್ನು ನೀಡಿರುತ್ತಾರೆ.

ದಿನಾಂಕ 19.12.2019 ರಂದು ಅರ್ಥಶಾಸ್ತ್ರದ ವಿಭಾಗದ ವತಿಯಿಂದ "ಸೂರ್ಯಗ್ರಹಣ ಬಿಂದು – ವಿಶ್ಲೇಷಣೆ" ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ರಾಘವೇಂದ್ರ ಎಂ.ಪಿ. ಇವರು ಆಗಮಿಸಿ ವಿದ್ಯಾರ್ಥಿಗಳಿಗೆ ಉಪನ್ಯಾಸವನ್ನು ನೀಡಿರುತ್ತಾರೆ.

ದಿನಾಂಕ 28.12.2019 ರಂದು "ಕವಿ–ಕಾವ್ಯ–ಸಮಾಗಮ" ಒಂದು ದಿನದ ಕಾರ್ಯಗಾರ. ಈ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಉಪಸನಾ ಮೋಹನ್‌ರವರು ಹಾಗೂ ದುಂಡಿರಾಜ್ ಹೆಚ್..ರವರು ಹಾಗೂ ಬಿ.ಆರ್. ಲಕ್ಷ್ಮಣ್‌ರಾವ್‌ರವರು ವಿದ್ಯಾರ್ಥಿಗಳಿಗೆ ಉಪನ್ಯಾಸವನ್ನು ನೀಡಿರುತ್ತಾರೆ.

ದಿನಾಂಕ 21.12.2019ರಂದು ಅರ್ಥಶಾಸ್ತ್ರದ ವಿಭಾಗದ ವತಿಯಿಂದ Student Seminar on "Abhijith Banerjee (Nobel Prize in Economics 2019)" ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ವಿಚಾರ ಸಂಕಿರಣಗಳನ್ನು ಮಂಡಿಸಲಾಯಿತು.

ದಿನಾಂಕ 01.02.2020ರಂದು ಅರ್ಥಶಾಸ್ತ್ರದ ವಿಭಾಗದ ವತಿಯಿಂದ "ಕೇಂದ್ರ ಮುಂಗಡ ಪತ್ರ 2020–21 ನೇರ ಪ್ರಸಾರ" ಈ ಕಾರ್ಯಕ್ರಮದಲ್ಲಿ ದೂರದರ್ಶನದ ಮುಖಾಂತರ ವಿದ್ಯಾರ್ಥಿಗಳಿಗೆ ಕೇಂದ್ರ ಮುಂಗಡ ಪತ್ರ 2020–21 ನೇರ ಪ್ರಸಾರ ಕಾರ್ಯಕ್ರಮವನ್ನು ರಾಘವೇಂದ್ರ ಎಂ.ಪಿ. ಹಾಗೂ ವಿದ್ಯಾಧರ ಎಂ.ವಿ. ತಾಂತ್ರಿಕ ವಿವರಣೆ ನೀಡಿದರು.

ದಿನಾಂಕ 07.02.2020 ರಂದು ಅರ್ಥಶಾಸ್ತ್ರ ವಿಭಾಗದ ವತಿಯಿಂದ ಅನಕು ಮುಂಗಡ ಪತ್ರ ಮನ್ನಣೆ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು "ಅಣಕು ಮುಂಗಡ ಪತ್ರ" ಕಾರ್ಯಕ್ರಮ ನಡೆಸಿಕೊಟ್ಟಿರುತ್ತಾರೆ. ಮುಂಗಡ ಪತ್ರ ಮಂಡಿಸುವಾಗ ವಿದ್ಯಾರ್ಥಿಗಳು ಚರ್ಚಿಸಿ ಮುಂಗಡ ಪತ್ರದ ಆಗುಹೋಗುಗಳ ಬಗ್ಗೆ ಬೆಳಕನ್ನು ಚೆಲ್ಲಿದರು.

ದಿನಾಂಕ 25.02.2020ರಂದು ನಡೆದ ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ "ಶೃಂಗ ಸಂಭ್ರಮ 2019–20" ಈ ಕಾರ್ಯಕ್ರಮವನ್ನು ಕಾಲೇಜು ಹಾಗೂ ಮೂರು ಸಂಘಗಳಾದ ಕಲಾ, ವಾಣಿಜ್ಯ, ವಿಜ್ಞಾನ ಸಂಘಗಳು ವಹಿಸಿಕೊಂಡಿರುತ್ತದೆ. ಹಾಗೂ ಈ ಕಾರ್ಯಕ್ರಮಗಳಲ್ಲಿ ನಾನಾ ಕಾಲೇಜುಗಳ ವಿಶ್ವಸ್ಥ ಮಂಡಳಿಯ ಸದಸ್ಯರಾದ ಕಂಬಳಗದ್ದೆ ಮಂಜುನಾಥರವರು ವ್ಯವಸ್ಥೆಯ ಔಚಿತ್ಯ ಕೊಂಡಾಡಿ ಮಾತನಾಡಿದರು.

ದಿನಾಂಕ 13.03.2020ರಂದು ನಡೆದ " Covid-19 ಭಯ ಬೇಡ, ಜಾಗೃತಿ ಅಗತ್ಯ" ಎಂಬ ಕಾರ್ಯಕ್ರಮವು ಸಂಪನ್ಮೂಲ ವ್ಯಕ್ತಿಗಳಾದ ಡಾ॥ ವಿದ್ಯಾಶಂಕರಿ, ವೈದ್ಯರು, ಸರ್ಕಾರಿ ಆಸ್ಪತ್ರೆ ಶೃಂಗೇರಿ ಇವರ ಉಪನ್ಯಾಸದೊಂದಿಗೆ ಕೊರೋನಾದ ಬಗ್ಗೆ ಭಯ ಬೇಡ ಮುಂಜಾಗ್ರತೆ ವಹಿಸಿ ಎಂಬ ಉಪನ್ಯಾಸದ ಕಾರ್ಯಕ್ರಮ ಜರುಗಿತು.



# ಕಲಾಸಂಘ – ಭಾಮತಿ

# Arts Club Report 2017-18

ಶ್ರೀ ಜೆ.ಸಿ.ಬಿ.ಎಂ ಕಾಲೇಜು ಶೃಂಗೇರಿ, ಕಲಾ ಸಂಘದ ವತಿಯಿಂದ ಬುಧವಾರ 10–01–2018ರಂದು "ವಿಶ್ವ ಮಾನವ" ದಿನಾಚರಣೆಯನ್ನು ಆಚರಿಸಲಾಯಿತು. ಕಲಾ ಸಂಘವನ್ನು ಉದ್ಘಾಟಿಸಿ ಕುವೆಂಪುರವರ ವಿಶ್ವ ಮಾನವ ಸಂದೇಶವನ್ನು ಕುರಿತು ಶ್ರೀಯುತ ಮಂಜುನಾಥ ಗೌಡ, ಶಿಕ್ಷಕರು, ಜಿ.ಜೆ.ಸಿ ಶೃಂಗೇರಿ ಇವರು ಮಾತನಾಡಿದರು. 'ಪಂಚಮಂತ್ರ ಹಾಗೂ ಸಪ್ತಸೂತ್ರಗಳ' ಹಿಂದಿನ ಅನನ್ಯತೆಯನ್ನು ಹೇಳಿದರು ತಿಳಿಸಿದರು.

'ಮಲೆನಾಡಿನ ಅಂಚಿನ ವ್ಯಕ್ತಿತ್ವಗಳನ್ನು' ಕಾದಂಬರಿ ಸಣ್ಣಕಥೆ ಹಾಗೂ ನಾಟಕಗಳಲ್ಲಿ ಕುವೆಂಪು ಚಿತ್ರಿಸಿದಷ್ಟು ಅಸ್ಮಿತೆಯಿಂದ ಇನ್ಯಾರೂ ಸೃಷ್ಟಿಸಲಾರರು. ನಾಗಚಂದ್ರನ ಜೈನ ರಾವಣನಿಂದ ಹಿಡಿದು ಪಾಪಿಗೂ ಉದ್ಧಾರವಿದೆ ಈ ಸೃಷ್ಟಿಯ ಮಹದ್ವ್ಯೂಹದೊಳಗೆ ಎನ್ನುತ್ತಾ ಮಂಥರೆ, ಊರ್ಮಿಳೆ ಇವರುಗಳ ಮಮತಾಮಯಿತನವನ್ನು ಬೇರೆ ಯಾವ ಪಾತ್ರಗಳಿಗಿಂತಲೂ ವಿಶಿಷ್ಟವಾದುದೆಂದು ಗುರುತಿಸಲಾಯಿತು.

ಕುವೆಂಪು ಚಿತ್ರಿಸಿದ ಮಲೆನಾಡಿನ ಪಕ್ಷಿ, ಪ್ರಾಣಿ, ಕೀಟ, ಹಣ್ಣು ಹಂಪಲುಗಳಲ್ಲಿ ಕೆಲವನ್ನು ಕೂಡ ಈಗಿನ ಯುವ ಜನಾಂಗ ಗುರುತಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕಿದೆ. ಭಾರತ ಕಂಡ ವಿಶಿಷ್ಟ ಕವಿ 'ಕುವೆಂಪು' ಎಂದು ಅವರನ್ನು ಕುರಿತು ಉಪನ್ಯಾಸ ಮಾಡಿದರು.

ನಂತರ ಕಾರ್ಯಕ್ರಮದ ಅಧ್ಯಕ್ಷರಾದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ ಸ್ವಾಮಿಯವರು ಪ್ರಕೃತಿಗೆ ಹೆಸರಾದಂತಹ ಥಾಮಸ್ ಹಾರ್ಡಿಗೆ ಇನ್ನೊಬ್ಬ ಸಮನಾದ ಕವಿ ಭಾರತದಲ್ಲಿದ್ದರೆ ಅದು ಕುವೆಂಪು ಆಗಿದ್ದಾರೆ. 1900 ಆಸುಪಾಸಿನ ಮಲೆನಾಡಿನ ಬದುಕಿನ ಬವಣೆಯನ್ನು ಕಾದಂಬರಿಗಳಲ್ಲಿ ದೃಶ್ಯ ಮಾಧ್ಯಮ ಅಚ್ಚೊತ್ತುವಂತೆ ಚಿತ್ರಿಸಿದ್ದಾರೆ. ಅಲ್ಲದೇ ಹಸಿರು ತುಂಬಿದ ಮಾಲಿನ್ಯ ರಹಿತ ಮಲೆನಾಡನ್ನು ಇನ್ನೊಮ್ಮೆ ನೋಡಬೇಕಿದ್ದರೆ ಅದು ಕುವೆಂಪು ಸಾಹಿತ್ಯದಲ್ಲಿ ಮಾತ್ರ.

ಮಲೆನಾಡಿನ ಮಳೆಯಿಂದ ಜಿನುಗುವ ಕತ್ತಲ ಗವಿಯ ಒಳಗಿಂದ ವಿಶ್ವ ಮಾನವ ಸಂದೇಶವನ್ನು ನೀಡುವಂತಹ ಕವಿಯನ್ನು ನೀಡಿರುವ ಈ ಮಲೆನಾಡು ಧನ್ಯತೆಯನ್ನು ಪಡೆದಿದೆ. ಮಲೆನಾಡಿನಿಂದ ಕುವೆಂಪು, ಕುವೆಂಪುವಿನಿಂದ ಈ ಸಾಮಾನ್ಯರು ಶಾಶ್ವತೆಯನ್ನು ಪಡೆದರು ಎನ್ನುವುದೇ ಹೆಮ್ಮೆ ಎಂದರು. ಕಲಾಸಂಘವು ಈ ವರ್ಷದ ಎಲ್ಲಾ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಲೆಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಐ.ಕ್ಯು.ಎಸ್.ಸಿ ಸಂಚಾಲಕರಾದ ಶ್ರೀಯುತ ದೇವದಾಸ್, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದಂತಹ ಶ್ರೀಯುತ ವಿದ್ಯಾಧರ್, ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಡಾ. ಅನಿತಾ ಹೆಗ್ಗೋಡು ಹಾಗೂ ಕಲಾ ಸಂಘದ ಅಧ್ಯಕ್ಷರಾದ ಕುಮಾರ ಸೃಜನ್ ಉಪಸ್ಥಿತರಿದ್ದರು.

# Arts Club Report 2014-15



# ಕಲಾ ಸಂಘದ ವರದಿ 2014–15

ಒಬ್ಬ ವ್ಯಕ್ತಿಯ ಜೀವಿತದ ಸಮಗ್ರ ಬೆಳವಣಿಗೆಯಲ್ಲಿ ಪಠ್ಯದಷ್ಟೇ ಪ್ರಮುಖ ಸ್ಥಾನವನ್ನು ಪಠ್ಯೇತರ ಅಂಶಗಳು ಪಡೆಯುತ್ತವೆ. ವಿದ್ಯಾರ್ಥಿದೆಸೆಯ ನಿರ್ಣಾಯಕ ಕಾಲಘಟ್ಟವಾದ ಕಾಲೇಜು ದಿನಗಳಲ್ಲಿ ಪಠ್ಯೇತರ ಚಟುವಟಿಕೆಗಳು ಪ್ರಮುಖವಾಗುತ್ತದೆ. ಈ ನೆಲೆಯಲ್ಲಿ 2014–15 ನೇ ಸಾಲಿನ ಕಲಾ ವಿದ್ಯಾರ್ಥಿಗಳ ಕಲಾ ಸಂಘವು ದಿನಾಂಕ 16–9–2013 ರಂದು ಪ್ರಾರಂಭಗೊಂಡಿತು.

ಕಲಾ ಸಂಘದ ಉದ್ಘಾಟಕರಾಗಿ ಶ್ರೀಯುತ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ವಿರೋಧ ಪಕ್ಷದ ಸಚೇತಕರು, ವಿಧಾನ ಪರಿಷತ್ತು ಕರ್ನಾಟಕ ಸರ್ಕಾರ ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ ಹೆಚ್.ಸಿ. ವೀರಪ್ಪಗೌಡ ವಹಿಸಿದ್ದರು.

ಜ್ಯೋತಿ ಬೆಳಗುವುದರ ಮೂಲಕ ಕಲಾಸಂಘವನ್ನು ಉದ್ಘಾಟಿಸಿದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ತಮ್ಮ ಉದ್ಘಾಟನಾ ನುಡಿಗಳಲ್ಲಿ ಜ್ಯೋತಿ ಜಗತ್ತನ್ನು ಬೆಳಗುತ್ತದೆ. ಜಗತ್ತು ಬೆಳಗುವನೆಂಬ ಭ್ರಮೆಗಲ್ಲ, ನನ್ನ ಮುಖ ನೀನು, ನಿನ್ನ ಮುಖ ನಾನು ನೋಡಲೆಂದು ಇದು ಎಂದು ಮನಸ್ಸಿನ ಅಂತರಂಗದ ಬಗ್ಗೆ ತಿಳಿಸಿದರು.

2014–15ರ ಸಾಲಿನ ಕಲಾಸಂಘದ ಕಾರ್ಯ ಚಟುವಟಿಕೆಗಳ ಪಟ್ಟಿ ಈ ಕೆಳಗಿನಂತಿರುತ್ತದೆ.

**ಕಲಾ ಸಂಘದ ಪದಾಧಿಕಾರಿಗಳು.**

| | |
|---|---|
| ಅಧ್ಯಕ್ಷ | ಲಿಖಿತ್ ಕೆ ಶೆಟ್ಟಿ |
| ಉಪಾಧ್ಯಕ್ಷ | ಅವಿನಾಶ್ ಬಿ |
| ಕಾರ್ಯದರ್ಶಿ | ಐಶ್ವರ್ಯ ವಿ ಶೆಟ್ಟಿ |
| ಸಹ ಕಾರ್ಯದರ್ಶಿ | ಪೃಥ್ವಿ ಎಂ.ಎಂ. |
| ಸಾಂಸ್ಕೃತಿಕ ಕಾರ್ಯದರ್ಶಿ | ಸುನೀಲ್ ಎಂ. |
| ಖಜಾಂಚಿ | ಕಾರ್ತಿಕ ಎಂ.ಬಿ. |

**ತರಗತಿ ಪ್ರತಿನಿಧಿಗಳು**

| | |
|---|---|
| ಪ್ರಥಮ ಬಿ.ಎ. | : ಮಧುಶ್ರೀ, ಪ್ರಗತಿ ಅಭಿಷೇಕ್, ಆದರ್ಶ |
| ದ್ವಿತೀಯ ಬಿ.ಎ. | : ನೇಹಾ, ಮಣಿಪ್ರಿಯ ಗುರುಪ್ರಸಾದ್, ಕಿರಣ್ |

**ಅಂತಿಮ ಬಿ.ಎ. ಎಲ್ಲಾ ವಿದ್ಯಾರ್ಥಿಗಳು ತರಗತಿ ಪ್ರತಿನಿಧಿ ಗಳಾಗಿರುತ್ತಾರೆ.**

| | |
|---|---|
| ಅಧ್ಯಾಪಕ ಸಲಹೆಗಾರರು: | ಡಾ ಹೆಚ್.ಸಿ.ವೀರಪ್ಪಗೌಡ |
| | ಶ್ರೀ ದತ್ತಾತ್ರೇಯ |
| | ಡಾ ಕೆ.ಪಿ.ಪ್ರಕಾಶ |
| | ಶ್ರೀಮತಿ ಯಶೋದಾ |
| | ಶ್ರೀ ಕೆ.ಎಸ್.ವೆಂಕಪ್ಪ |

ದಿನಾಂಕ 19 ಮತ್ತು 20 ಆಗಸ್ಟ್ 2014ರಂದು ಕಲಾ, ವಾಣಿಜ್ಯ ಮತ್ತು ನಿರ್ವಹಣ ಸಂಘಗಳೊಡನೆ ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು ಹಮ್ಮಿಕೊಂಡೆವು. ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರತಿಭಾಪ್ರದರ್ಶನಕ್ಕೆ ಸೂಕ್ತ ವೇದಿಕೆಯನ್ನು ನಿರ್ಮಿಸಿ ಕೊಡಲಾಯಿತು.

ದಿನಾಂಕ 9 ಮತ್ತು 10 ನೇ ಅಕ್ಟೋಬರ್ 2014ರಂದು ಡಾ॥ ಬೆಟಗೇರಿ ಕೃಷ್ಣಶರ್ಮರ ಕಾವ್ಯ; ಕಾವ್ಯಾರ್ಥ ಚಿಂತನ ಹಾಗೂ ಎನಿತು ಇನಿದು ಈ ಕನ್ನಡ ನುಡಿಯು ಎಂಬ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಸಹಕಾರಿಯಾದೆವು

ದಿನಾಂಕ 31–1–2015ರಂದು ಭಾವಬುತ್ತಿ ಎಂಬ ರಮೇಶ್ ಬೇಗಾರ್ ನಿರ್ದೇಶನದಲ್ಲಿ ಭಾವಗೀತೆ ಗಾಯನ ಕಾರ್ಯಕ್ರಮ ನಡೆಸಲಾಯಿತು. ಸಾಗರದ ಸಹನ ಹಾಗೂ ಗಣಪತಿ ಕಾರ್ಯಕ್ರಮ ನಡೆಸಿಕೊಟ್ಟರು

ದಿ 2–2–2015 ರಂದು ಕುವೆಂಪು ನಮನ ಕಾರ್ಯಕ್ರಮ ನಡೆಸಿಕೊಡಲಾಗಿದ್ದು ಕುವೆಂಪು ಜನ್ಮ ದಿನಾಚರಣೆಯ ಅಂಗವಾಗಿ ಕುವೆಂಪು ಒಂದು ನೆನಪು ಎಂಬ ಶೀರ್ಷಿಕೆಯಲ್ಲಿ ಕುವೆಂಪು ಭಾವಗೀತೆ ಗಾಯನವನ್ನು ಕಿರಣಕೆರೆ ಉಮೇಶ್ಚಂದ್ರ ನಡೆಸಿಕೊಟ್ಟರು

ದಿ 12–2–2015ರಂದು ಮೂರು ಸಂಘಗಳು ಜೊತೆಗೂಡಿ ಅಂತರಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮ ಶೃಂಗ ಸಂಭ್ರಮವನ್ನು ಹಮ್ಮಿಕೊಂಡೆವು.

ದಿ 4–3–2015 ರ ಬುಧವಾರದಂದು ಜಿಲ್ಲಾ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಂಡೆವು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀಮತಿ ಸುಕನ್ಯ ಕಳಸ ಯಶಸ್ವಿಯಾಗಿ ನಡೆಸಿಕೊಟ್ಟರು.

ದಿ 6–4–2015 ರಂದು ಕಲಾ, ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣಾ ಸಂಘಗಳ ಸಮಾರೋಪ ಸಮಾರಂಭ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ಡಾ॥ ಮೋಹನ್ ಆಳ್ವ ಅವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ॥ ಹೆಚ್.ಸಿ. ವೀರಪ್ಪಗೌಡ ವಹಿಸಿದ್ದರು

ಕಲಾ ಸಂಘದ ಯಶಸ್ಸಿಗೆ ಸಹಕರಿಸಿದ ಶ್ರೀ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಂಶುಪಾಲರು ಹಾಗೂ ಸಿಬ್ಬಂದಿವರ್ಗದವರಿಗೆ, ಅಧ್ಯಾಪಕ ಸಲಹೆಗಾರರಿಗೂ, ಅಧ್ಯಾಪಕೇತರ ಸಿಬ್ಬಂದಿವರ್ಗದವರಿಗೂ ಎಲ್ಲ ಕಲಾ ವಿದ್ಯಾರ್ಥಿಗಳಿಗೂ ಹಾಗು ಕಾಲೇಜಿನ ವಿದ್ಯಾರ್ಥಿ ವೃಂದದವರಿಗೆ ವಂದನೆಗಳನ್ನು ಸಲ್ಲಿಸುತ್ತೇವೆ.

**ಅಧ್ಯಕ್ಷರು ಮತ್ತು ಪದಾಧಿಕಾರಿಗಳು,**
ಕಲಾ ಸಂಘ